ಪ್ರಜ್ಞಾ ಜೋಶಿ ರಸವತ್ತಾಗಿ ಸಿನಿಮಾ ಕತೆಯೊಂದನ್ನು ಹೇಳುವಂತೆ ಹೇಳಿದ್ದಳು. ಋಗ್ವೇದಿಯವರಿಗೆ ಒಂದು ಕ್ಷಣ ಎದೆ ಧಸಕ್ಕೆಂದಿತ್ತು. ತಾನೇ ಬಿಲ್ ಕೊಡುತ್ತಾ ಪ್ರಜ್ಞಾ ಜೋಶಿ, ''ಸಿಲ್ಲಿ ಅನ್ನಿಸಲ್ವಾ, ಮನುಷ್ಯರ ದೇಹಗಳೆಲ್ಲ ಜೀವಾಣುಗಳಿಂದಲೇ ಆದವು ಎಂದು ಆ ಗುಲ್ಡುಗೆ ಗೊತ್ತಿಲ್ವಾ. ಹೆಂಡತೀನ ಕನ್ವಿನ್ಸ್ ಮಾಡಿದ್ದಿದ್ರೆ ಆಗಿರ್ತಿತ್ತು. ಇಲ್ಲ ಅಂದ್ರೆ ದುಡ್ಡು ಖರ್ಚು ಮಾಡಿ ಅಬಾರ್ಶನ್ ಮಾಡಿಸಿದ್ರೂ ಆಗಿರೋದು. ನಾನೇ ತಗೊ, ಒಂದೈದಾರು ಜನ ಸೀನಿಯರ್‌ಗಳೊಂದಿಗೆ ಮಲಗಿರಬಹುದು ಏನೇನೋ ಕೆಲಸಕ್ಕಾಗಿ. ಅದನ್ನ ಎಂಜಾಯ್ ಕೂಡಾ ಮಾಡ್ದೆ. ಈಗ ಎಂಜಾಯ್ ಮಾಡ್ಲಿಕ್ಕೆ ಏನಿದೆ. ಹುಟ್ಟೋವಾಗ ಒಂಟಿಯಾಗಿ ಹುಟ್ತೀವಿ. ಸಾಯೋವಾಗ ಒಂಟಿಯಾಗಿಯೇ ಸಾಯ್ತೀವಿ. ಮಧ್ಯದಲ್ಲಿ ಇನ್ನೊಂದು ಯಾವ ದೇಹದೊಂದಿಗೆ ಸುಖ ಪಟ್ಟರೂ ವ್ಹಾಟ್ ಮ್ಯಾಟರ್ಸ್.'' ಎಂದು ಅಗಲವಾಗಿ ಬಾಯಿ ಬಿಟ್ಟಿದ್ದಳು. ಹಲ್ಲುಗಳು ಫಳಕ್ಕನೆ ಹೊಳೆದಿದ್ದವು. ಬಚ್ಚಲಿನಲ್ಲಿ ಬಿದ್ದು ಮುಂದಿನ ಎರಡು ಹಲ್ಲುಗಳು ಉದುರಿ ಹೋಗಿದ್ದರಿಂದ ಪ್ರಜ್ಞಾ ಜೋಶಿ ಗೋಲ್ಡ್ ಮೆಟಲ್‌ನಲ್ಲಿ ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದಳು. ಪ್ರಜ್ಞಾ ಜೋಶಿಯ ಮಾತುಗಳಲ್ಲಿ ಒಂಥರ ಲಾಜಿಕ್ ಇದೆಯೆಂದೆನಿಸಿತು ಋಗ್ವೇದಿಯವರಿಗೆ. ಆದರೂ, ಒಂದು ಸಿಸ್ಟಮ್‌ಗೆ ಕಂಟ್ರೋಲ್ ಇಲ್ಲದಿದ್ದರೆ ಅದು ಬೇಗ ಕುಸಿದು ಬೀಳುತ್ತದೆಂಬ ಸತ್ಯ ಸಂಗತಿಯೂ ಅವರ ಪ್ರಜ್ಞೆಯಲ್ಲಿ ಇಣುಕಿತ್ತು.

ಅವೊತ್ತು ರಾತ್ರಿ ಮುಕುಂದ ರಾವ್ ತುಂಬಾ ಕಾಡಿದ್ದ. ಮನುಷ್ಯನ ದೇಹದಲ್ಲಿರುವುದು ಎಪ್ಪತ್ತು ಪರ್ಸೆಂಟ್ ನೀರು! ಭೂಮಿಯ ಮೇಲೆ ಹರಿಯುವ ನೀರು ಪರಸ್ಪರ ಸೇರಿ ನದಿಯಾಗುತ್ತದೆ, ಸರೋವರವಾಗುತ್ತದೆ, ಸಮುದ್ರವೂ ಆಗುತ್ತದೆ. ಹಾಗೆಯೇ ಯಾವ ದೇಹ ಯಾವ

